# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>

<u>ಸಿ.ಸಿ. ನಂ.30/2022</u>

CW-6/PW-5

| | | |
|---|---|---|
| ಹೆಸರು | : | ಅಂದಾನಿ |
| ತಂದೆ ಹೆಸರು | : | ತಮ್ಮಯ್ಯ |
| ವಯಸ್ಸು | : | 45 ವರ್ಷ |
| ವೃತ್ತಿ | : | ಕಲಾವಿದ |
| ವಾಸ ಸ್ಥಳ | : | ಮಲ್ಲೇಶ್ವರ ಬಡಾವಣೆ, ರಾಮನಗರ |
| ದಿನಾಂಕ | : | 23-07-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>

ಸಾಕ್ಷಿಗೆ ನಿಪಿ-5 ಪಂಚನಾಮೆಯನ್ನು ತೋರಿಸಿದ್ದು, ನಿಪಿ-5ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಿಪಿ-5ಕ್ಕೆ ಸಹಿಯನ್ನು 2021ರಲ್ಲಿ ಚೈನು ಕಳ್ಳತನದ ವಿಚಾರವಾಗಿ ಪೊಲೀಸರು ಮಲ್ಲೇಶ್ವರ ಬಡಾವಣೆಯ ಮಹೇಶ್ ಸ್ಟೋರ್ ಬಳಿ ಮಹಜರ್ ಗೆ ಬಂದಿದ್ದರು. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿಕೊಂಡರು. ಆಗ ನಾನು ಸಹಿ ಹಾಕಿದೆ. ಮಹಜರ್ ಕಾಲಕ್ಕೆ ಮಹೇಶ್ ರವರು ಸಹ ಹಾಜರಿದ್ದರು. ಪೊಲೀಸರು ಬೇರೆ ಯಾರನ್ನು ಕರೆದುಕೊಂಡು ಬಂದಿದ್ದರು ಎಂದು ನಾನು ಗಮನಿಸಲಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>

ಈಗ ವಿ.ಸಿ. ಮುಖಾಂತರ ಹಾಜರಾಗಿರುವ ಆರೋಪಿಯನ್ನು

ಪೊಲೀಸರು ಮಹಜರ್ ಕಾಲಕ್ಕೆ ಕರೆ ತಂದಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲು ಆರೋಪಿ ಪರ:-

ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.